

ಕಲೆ: ಸುರೇಶ್ ಅರ್ಕಸಾಲಿ

ಬೆಳೆಯಿತು ಎಂದು ಹೇಳುವುದು ಸಾಮಾನ್ಯವಾದ ವಿಚಾರ. ಇಂಥ ಮಾತುಗಳ ಹಿಂದಿನ ಸತ್ಯವೆಂದರೆ ಅದು ದೀಪದ ಕೆಳಗಿನ ಕತ್ತಲಿನ ಸತ್ಯದ ವಸ್ತು ಸತ್ಯ. ಏಕೆಂದರೆ, ನಮ್ಮವರಿಗೆ ಅಕ್ಷರಲೋಕದ್ದು ಮಾತ್ರ ಪ್ರಮಾಣುವಾಗಿ ವಿಮರ್ಶೆಗೆ ತೆರೆದುಕೊಳ್ಳುತ್ತದೆ. ಆದರೆ, ಅನಕ್ಷರಲೋಕದ ಸಂಪತ್ತಿನ ಬಗ್ಗೆ ಅವರ ಅಜ್ಞಾನ ದೀಪದ ಕೆಳಗಿನ ಕತ್ತಲಿನ ಹಾಗೆ ಇರುತ್ತದೆ.

ಮಕ್ಕಳನ್ನು ಕುರಿತು ಕುವೆಂಪು ಅವರು 'ಮಗು ಹುಟ್ಟುತ್ತಾ ವಿಶ್ವಮಾನವನಾಗಿ ಹುಟ್ಟುತ್ತದೆ. ಆದರೆ, ಬೆಳೆಯುತ್ತಾ ಅದು ಅಲ್ಪಮಾನವನಾಗಿ ಬೆಳೆಯುತ್ತದೆ' ಎಂದು ಹೇಳಿದ್ದಾರೆ. ಇದು ಸತ್ಯ. ಕುಟುಂಬ, ಶಾಲೆ, ಸಮಾಜ, ಧರ್ಮ, ಭಾಷೆ ಇತ್ಯಾದಿಗಳೆಲ್ಲವೂ ಮಗು ಅಲ್ಪಮಾನವನಾಗಿ ಬೆಳೆಯಲು ನೀರೆರೆಯುತ್ತವೆ, ಪೋಷಿಸುತ್ತವೆ. ಆದರೆ, ನಿಜವಾದ ಮನುಷ್ಯನನ್ನು ರೂಪಿಸಬೇಕಾದುದು ಈ ಎಲ್ಲವುಗಳ ಜವಾಬ್ದಾರಿಯಾಗಿದೆ. 'ಮನುಜಮತ ವಿಶ್ವಪಥ' ಎಂದು ಕುವೆಂಪು ಹೇಳಿದ ವಿಕಾಸಪೂರ್ಣ ವ್ಯಕ್ತಿತ್ವ ಇಂದಿನ ಅಷ್ಟೇ ಅಲ್ಲ, ಎಂದಿನ ಕನಸಾಗಿದೆ.

ಮಗುವಿನ ಬೆಳವಣಿಗೆಯನ್ನು ಕುರಿತು ಮಾತನಾಡುವಾಗ ನಾವು ಪದೇ ಪದೇ ಉದ್ಧರಿಸುವ ಮಾತು, 'ಮನೆಯೆ ಮೊದಲ ಪಾಠಶಾಲೆ ತಾಯಿ ತಾನೆ ಮೊದಲ ಗುರುವು'. ಈ ಮಾತನ್ನು ವಿವೇಚಿಸಿದಾಗ ತಾಯಿಯ ಬಗೆಗಿನ ಗೌರವದ ಭಾವದಲ್ಲಿ ಈ ಮಾತು ಮೂಡಿರಬಹುದು ಅನ್ನಿಸುತ್ತದೆ. ಅಷ್ಟೇ ಅಲ್ಲ, ತಾಯಿ–ಮಗುವಿನ ಕರುಳಬಂಧದ ಸಂಬಂಧವೂ ಈ ಮಾತಿನ ಒಳಗಿನ ಸತ್ಯವಾಗಿರಲೂಬಹುದು. ಆದರೆ, ಪ್ರಶ್ನೆ ಅದಲ್ಲ, ಮಗುವಿನ ಬೆಳವಣಿಗೆಗೆ ತಾಯಿ ಮಾತ್ರ ಹೊಣೆಗಾರಳಾಗುವುದು ಎಷ್ಟು ಸರಿ? ತಂದೆಯ ಜವಾಬ್ದಾರಿ ಇಲ್ಲವೇ? ಕುಟುಂಬ ಸದಸ್ಯರ ಹೊಣೆಯೂ ಇದಲ್ಲವೇ? ವಿಸ್ತರಿಸಿದಂತೆ ಮುಂದುವರಿದರೆ ಸಮಾಜ–ಶಿಕ್ಷಣ ಈ ಹೊಣೆಯ ಭಾಗವಾಗಿರುವುದು ಅಗತ್ಯವಲ್ಲವೇ? ಹೀಗೆ ಈ ಪ್ರಶ್ನೆ ವ್ಯಕ್ತಿ–ಸಮಷ್ಟಿಗಳ ಸಾವಯವ ಸಂಬಂಧದ ಉತ್ತರದಾಯಿತ್ವಕ್ಕೆ ವಿಸ್ತರಿಸಿಕೊಳ್ಳುತ್ತದೆ. ಈ ಸಾವಯವ ಸಂಬಂಧದ ಅನುಬಂಧ ನಮ್ಮ ಕನ್ನಡ ಜಾನಪದದಲ್ಲಿ ಹೇಗೆ ಪರಂಪರೆಯ ಅರಿವಾಗಿ ಹರಿದಿದೆ ಎಂಬುದನ್ನು ಉದಾಹರಣೆಗಳ ಮೂಲಕ ನಾವು ಗಮನಿಸಬಹುದು.